ಮಹಿಳೆಯರು ಪರ್ಯಾಯ ಆಭರಣಗಳ ಮೇಲೆ ಮೋಹಿತರಾಗಿದ್ದಾರೆ. ಪ್ಲಾಟಿನಂ, ಆಕ್ಸಿಡೈಸ್ಡ್, ಒನ್ ಗ್ರಾಂ ಗೋಲ್ಡ್, ಪಂಚಲೋಹ, ಕೋಬಾಲ್ಟ್, ಪಲ್ಲಾಡಿಯಂ, ಸೆರಾಮಿಕ್ ಕಾರ್ಬೈಡ್, ಸ್ಟೀಲ್, ಟೈಟಾನಿಯಂ, ಇಮಿಟೇಷನ್ ಜ್ಯುವೆಲ್ಲರಿಗಳಂತಹ ಪರ್ಯಾಯ ಆಭರಣಗಳು ಇಂದು ಜನಪ್ರಿಯವಾಗಿದ್ದಲ್ಲದೆ ಬಹುಬೇಡಿಕೆ ಗಳಿಸುತ್ತಿವೆ.

ಒಡವೆ ಚಿನ್ನದ್ದೇ ಆಗಬೇಕು, ವಜ್ರದ ಆಭರಣವನ್ನೇ ತೊಡಬೇಕು, ಬೆಳ್ಳಿಯ ಬೆಡಗಿನ ಒಡವೆಯೇ ಇರಬೇಕು ಎಂಬ ಪರಿಧಿಯನ್ನು ದಾಟಿ ಇತ್ತೀಚೆಗೆ ಮಹಿಳೆಯರು ಪರ್ಯಾಯ ಆಭರಣಗಳತ್ತ ಚಿತ್ತ ಹರಿಸಿದ್ದಾರೆ. ಬೆಲೆ ಏರಿಕೆಯ ಬಿಸಿ ಒಂದೆಡೆಯಾದರೆ, ಚಿನ್ನದ ಒಡವೆಗಳಿಗಿಂತಲೂ ಹೆಚ್ಚು ವಿನ್ಯಾಸದ ಆಯ್ಕೆಗಳು ಇತರ ಆಭರಣಗಳಲ್ಲಿ ಮಹಿಳೆಯರಿಗೆ ಲಭ್ಯವಿರುವುದು ಇನ್ನೊಂದು ಕಾರಣ. ಚಿನ್ನ ಬಿಟ್ಟು ಉಳಿದ ಲೋಹಗಳಿಂದ ಮಾಡಿದ ಆಭರಣಗಳನ್ನು ಆರಿಸುವಾಗ, ಆ ಒಡವೆ ಯಾವ ಲೋಹದಿಂದ ಮಾಡಿದೆ ಎಂದು ತಿಳಿಯುವುದು ಕಷ್ಟ. ಹೆಚ್ಚುಕಡಿಮೆ ಎಲ್ಲ ಪರ್ಯಾಯ ಆಭರಣಗಳೂ ಹೊಳೆಹೊಳೆವ ಲೋಹದಿಂದಲೇ ಮಿಂಚುತ್ತಿರುತ್ತವೆ. ಒಡವೆ ಖರೀದಿಸುವಾಗ ಅದು ನಮ್ಮ ದೇಹ ಪ್ರಕೃತಿಗೆ ಒಗ್ಗುವುದೇ ಎಂಬುದನ್ನೂ ಗಮನಿಸಬೇಕು. ಕೆಲವರಿಗೆ ಕೃತಕ ಒಡವೆಗಳು ಅಲರ್ಜಿ ಆಗುವ ಸಾಧ್ಯತೆ ಇದೆ. ಆಯ್ಕೆ ಕೂಡ ಬಹಳ ಮುಖ್ಯ.

### ಯುವತಿಯರ ಚಿತ್ತ ಪ್ಲಾಟಿನಂ ಒಡವೆಯತ್ತ!

ವಿದೇಶಗಳಲ್ಲಿ ಮನೆಮಾತಾಗಿರುವ ಪ್ಲಾಟಿನಂ ಈಗ ನಮ್ಮ ದೇಶದಲ್ಲೂ ಫ್ಯಾಷನ್ ಟ್ರೆಂಡ್ ಸೃಷ್ಟಿಸುತ್ತಿದೆ.





ಹೊಸ ಹೊಸ ವಿನ್ಯಾಸದ ಪ್ಲಾಟಿನಂ ಒಡವೆಯತ್ತ ಮಹಿಳೆಯರು ಮುಖಮಾಡಿದ್ದಾರೆ. ಚಿನ್ನಕ್ಕೆ ಹೋಲಿಸಿದರೆ ಪ್ಲಾಟಿನಂ ದರ ಬಹಳ ಕಡಿಮೆ. ಸದ್ಯ ಪ್ಲಾಟಿನಂ ಬೆಲೆ ಬೆಂಗಳೂರಿನಲ್ಲಿ ಪ್ರತಿ ಗ್ರಾಂಗೆ 3,910 ರೂಪಾಯಿ ಇದೆ. ಇದರಲ್ಲಿ ಹಲವು ವಿನ್ಯಾಸದ, ಆಕರ್ಷಕ ಒಡವೆಗಳು ಸಿಗುವುದರಿಂದ ಪಾರ್ಟಿವೇರ್‌ಗೆ ಸೂಕ್ತ ಎನಿಸಿವೆ.

ಪ್ಲಾಟಿನಂ ಒಡವೆ ಮಹಿಳೆಯರನ್ನು ಸೆಳೆಯಲು ಕಾರಣ ಹಲವು. ಈ ಲೋಹದ ನೈಸರ್ಗಿಕ ಬಿಳಿ ಬಣ್ಣ ಎಂದಿಗೂ ಮಾಸುವುದಿಲ್ಲ, ಒಡವೆ ಸವೆಯುವುದಿಲ್ಲ. ಎಂದೆಂದೂ ಬಿಡಿಸಲಾಗದ ಬಾಂಧವ್ಯ, ಪ್ಲಾಟಿನಂ ಶುದ್ಧತೆಯ ಸಂಕೇತ. ಈ ಲೋಹ ಪ್ರೀತಿಯ ಸಂಕೇತ, ಅನುಬಂಧದ ಪ್ರತೀಕ ಎನ್ನುತ್ತಾರೆ ವರ್ತಕರು. ಒಂದು ಮೂಲದ ಪ್ರಕಾರ ಪ್ಲಾಟಿನಂ ಚಿನ್ನಕ್ಕಿಂತ 30 ಪಟ್ಟು ಹೆಚ್ಚು ಶುದ್ಧವಾದದ್ದು, ದೀರ್ಘಕಾಲ ಬಾಳಿಕೆ ಬರುತ್ತದೆ. ಇಷ್ಟೆಲ್ಲ ಪ್ಲಸ್ ಪಾಯಿಂಟ್ ಇರುವುದರಿಂದಲೇ ಪ್ಲಾಟಿನಂ ಆಭರಣ ಬೇಡಿಕೆ ಹೆಚ್ಚಿಸಿಕೊಳ್ಳುತ್ತಿದೆ.

ಪ್ಲಾಟಿನಂ ಮೇಲ್ನೋಟಕ್ಕೆ ಅಲ್ಯುಮಿನಿಯಂ ಅನ್ನೇ ಹೋಲುತ್ತದೆ, ಹಿಂದೆಲ್ಲ ಈ ಲೋಹದ ಒಡವೆ ಅಷ್ಟು ಜನಪ್ರಿಯವಾಗಿರಲಿಲ್ಲ. ಆದರೆ ಈಗೀಗ ಪ್ಲಾಟಿನಂ ಆಭರಣ ಕೊಳ್ಳುವ, ಧರಿಸಿ ಸಂಭ್ರಮಿಸುವ ಹೆಣ್ಣುಮಕ್ಕಳ ಪಡೆ ದೊಡ್ಡದಾಗಿಯೇ ಇದೆ ಎನ್ನುವುದು ಕೂಡ ವರ್ತಕರ ಅಭಿಪ್ರಾಯ. ಚಿನ್ನ, ಬೆಳ್ಳಿ, ವಜ್ರಗಳಿಗೆ ಹೋಲಿಸಿದರೆ ಪ್ಲಾಟಿನಂ ಆಭರಣ ಅಷ್ಟೊಂದು ಫಳಫಳ ಹೊಳೆಯುವುದಿಲ್ಲ. ಕಣ್ಣು ಕುಕ್ಕುವುದಿಲ್ಲ. ನೋಟದಲ್ಲಿ ಸ್ಟೀಲ್ ಅನ್ನೇ ಹೋಲುತ್ತದೆ. ಇದರ ಬೆಲೆ ಹಾಗೂ ಪ್ರಾಮುಖ್ಯದ ಬಗ್ಗೆ ಕಳ್ಳರಿಗೆ ಅರಿವೂ ಇಲ್ಲದ ಕಾರಣ ಕಳ್ಳಕಾಕರು ದೋಚುತ್ತಾರೆ ಎಂಬ ಭಯವೂ ಇಲ್ಲ. ಶ್ರೀಮಂತ ವರ್ಗದ ಮಹಿಳೆಯರಿಗೆ, ಆಧುನಿಕ ಮನೋಭಾವದವರಿಗೆ, ಫ್ಯಾಷನ್ ಬಯಸುವ ಯುವತಿಯರಿಗೆ, ಹಳದಿ ಲೋಹವನ್ನು ಇಷ್ಟಪಡದ ತರುಣಿಯರಿಗೆ ಪ್ಲಾಟಿನಂ ಹೇಳಿ ಮಾಡಿಸಿದ ಆಭರಣ.

'ವ್ಯಾಲಂಟೇನ್ಸ್ ಡೇ'ಗೆ ಪ್ಲಾಟಿನಂ

### ಕುಸುರಿ ಕೆತ್ತನೆಯ ಒಡವೆಗಳು

ಕುಸುರಿ ಕೆತ್ತನೆ ಇರುವ ಒಡವೆಗಳು ಚಿನ್ನದಲ್ಲೇ ಇರಬೇಕೆಂದಿಲ್ಲ. ಕೃತಕ ಆಭರಣದಲ್ಲೂ ಸುಂದರ ಕುಸುರಿ ವರ್ಕ್ ಇರುವ ಆಭರಣ ಈಗ ಲಭ್ಯ. ಇಮಿಟೇಟಿಂಗ್ ಜ್ಯುವೆಲ್ಲರಿಗಳಲ್ಲಿ ಬಳಸುವ ವಿವಿಧ ಬಣ್ಣದ ಹರಳುಗಳನ್ನು ಅಳವಡಿಸಿದ ಒಡವೆ ಸಖತ್ ಲುಕ್ ಕೊಡುತ್ತದೆ.

ಒಡವೆಯ ಮೇಲೆ ಹರಳುಗಳು ಮಾಯಾಲೋಕವನ್ನೇ ಸೃಷ್ಟಿಸುವಷ್ಟು ಚೆನ್ನಾಗಿವೆ. ಚಿನ್ನವನ್ನೇ ಹೋಲುವ ಇತರೆ ಲೋಹಗಳ ಅಡಿಪಾಯವಿರುವ ಒಡವೆಗಳಿಗೆ ಕೃತಕ ಹರಳುಗಳೇ ಚೆನ್ನಾಗಿ ಕಾಣುತ್ತವೆ. ಅಮೆರಿಕನ್ ಡೈಮಂಡ್, ಹವಳ, ರೂಬಿ, ಎಮರಾಲ್ಡ್, ನೀಲ ಮುಂತಾದ ಹರಳುಗಳನ್ನು ಸೇರಿಸಿ ಕುಸುರಿ ಕೆತ್ತನೆ ಮಾಡಿರುವ ಒಡವೆಗಳು 'ಎವರ್‌ಗ್ರೀನ್' ಆಗಿ ಮಿಂಚುತ್ತಿವೆ. ಕಾಸಿನ ಸರ, ಗೆಜ್ಜೆ ಮಾಲಾಕ್, ಕೊತ್ತಂಬರಿ ಹಾರ, ಮುಷ್ಟಿ ಸರ, ಕಂಠೀಹಾರ, ಕಿವಿಯೋಲೆಗಳು ಕುಸುರಿ ಕೆತ್ತನೆಯಲ್ಲಿ ಬಂದು ತೊಟ್ಟುಕೊಂಡಾಗ ಅದರ ಸೊಬಗೇ ಅವರ್ಣನೀಯ.

ಚಿನ್ನದ ಗುಂಡುಗಳ ಬಣ್ಣವನ್ನೇ ಹೋಲುವ ಕೃತಕ ಆಭರಣದ ಗುಂಡುಗಳನ್ನು ದಾರದಲ್ಲಿ ಪೋಣಿಸಿ ತಯಾರಿಸಿದ ಹಗುರವಾದ ಆಭರಣ ಜೋಮಾಲೆ ಕೂಡ ಫ್ಯಾಷನ್ ಲೋಕದಲ್ಲಿ ಭದ್ರವಾಗಿದೆ. ಇವೆಲ್ಲದರ ಜೊತೆಗೆ ಚಂದ್ರಾಭರಣ ಇಂದಿನ ಲೇಟೆಸ್ಟ್ ಟ್ರೆಂಡ್. ಈ ಆಭರಣ ಪದಕ, ಓಲೆ, ವೈವಿಧ್ಯಗಳಲ್ಲಿ ಲಭ್ಯವಿದೆ. ಸೀರೆ, ಚೂಡಿದಾರ್, ಲೆಹೆಂಗಾ... ಹೀಗೆ ಯಾವುದೇ ತರಹದ ಉಡುಪಿಗೂ ಮ್ಯಾಚ್ ಆಗುವಂತಿದೆ. ಮಿಕ್ಸ್ ಅಂಡ್ ಮ್ಯಾಚ್ ಮಾಡಿಕೊಳ್ಳಲು ಇಂತಹ ಒಡವೆ ಸಹಕಾರಿಯೂ ಆಗಿದೆ.